# ಎನ್‌ಐಟಿಕೆಯಲ್ಲಿ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್

## ▶ 200ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗಿ: ತಾಂತ್ರಿಕ ಸಮಸ್ಯೆಗಳ ಪರಿಹಾರಕ್ಕೆ ಸವಾಲು

**ಸುರತ್ಕಲ್, ಡಿ. 11:** ಇಲ್ಲಿನ ಎನ್ ಐಟಿಕೆ ಕ್ಯಾಂಪಸ್‌ನಲ್ಲಿ ಬುಧವಾರ ಸ್ಮಾರ್ಟ್ ಇಂಡಿಯಾ ಹ್ಯಾಕಥಾನ್ 2024 ಬುಧವಾರ ಆರಂಭವಾಗಿದ್ದು, ಇಲ್ಲಿನ ಕೇಂದ್ರವೊಂದರಲ್ಲಿಯೇ 200ಕ್ಕೂ ಅಧಿಕ ಪ್ರತಿಭಾವಂತ ವಿದ್ಯಾರ್ಥಿಗಳು ಭಾಗಿಯಾದರು.




ದೇಶದ 51 ಸೆಂಟರ್‌ಗಳಲ್ಲಿ ಎನ್ ಐಟಿಕೆ ಒಂದಾಗಿದ್ದು, ವಿವಿಧೆಡೆಯಿಂದ ಪ್ರತಿಭಾವಂತರು ತಮ್ಮ ಸಂಶೋಧನೆಯ ಬಗ್ಗೆ ಈ ಮುಕ್ತ ಕಾರ್ಯಕ್ರಮದಲ್ಲಿ ಭಾಗವಹಿಸಿ ತಂಡಗಳಿಗೆ ಕೊಟ್ಟಿರುವ ಸಾಫ್ಟ್‌ವೇರ್ ಸಮಸ್ಯೆಗಳ ಕುರಿತಂತೆ ಬಗೆ ಹರಿಸಿ ಹಾಗೂ ಹೊಸ ಆವಿಷ್ಕಾರದ ಕುರಿತಂತೆ ತಮ್ಮ ಸಾಫ್ಟ್‌ವೇರ್‌ಗಳನ್ನು ಮಂಡಿಸಲಿದ್ದಾರೆ.

ಕರ್ನಾಟಕ, ಆಂಧ್ರ, ಭೋಪಾಲ್ ಸೇರಿದಂತೆ ವಿವಿಧೆಡೆಯಿಂದ ವಿದ್ಯಾರ್ಥಿಗಳು ಆಗಮಿಸಿದ್ದು, 36 ಗಂಟೆಗಳ ಒಳಗಾಗಿ ಕರ್ತವ್ಯ ಮುಗಿಸುವಲ್ಲಿ ನಿರತರಾಗಿದ್ದರು.

### ತಾಂತ್ರಿಕ ಸಮಸ್ಯೆ ಪರಿಹಾರ, ಅನ್ವೇಷಣೆಗೆ ಪ್ರೋತ್ಸಾಹ

ಎನ್ಐಟಿಕೆ ಕೇಂದ್ರದ ಕಾರ್ಯಕ್ರಮ ಉಸ್ತುವಾರಿ ವೆಂಕಟೇಶ್ ಪೆರುಮಾಳ್ ಮಾತನಾಡಿ, 33 ತಂಡಗಳು ಆಗಮಿಸಿದ್ದು, ವಿದ್ಯಾರ್ಥಿನಿಯರ ತಂಡವೂ ಭಾಗಿಯಾಗಿದೆ. ಎನ್ಐಟಿಕೆ ಕೇಂದ್ರದಲ್ಲಿ ಒಟ್ಟು 6 ಸಮಸ್ಯೆಗಳನ್ನು ಗುರುತಿಸಿ ನೀಡಲಾಗಿದೆ. ಈ ಹ್ಯಾಕಥಾನ್ ಫೈನಲ್ ಆಗಿದ್ದು ವಿಜೇತರನ್ನು ಆಯ್ಕೆ ಮಾಡಲಾಗುತ್ತದೆ. ಕೇಂದ್ರದ ಕಲ್ಲಿದ್ದಲು, ಯುವ ಮತ್ತು ಕ್ರೀಡಾ ಇಲಾಖೆಯಿಂದ ತಲಾ ಮೂರು ಸಮಸ್ಯೆ ನೀಡಲಾಗಿದೆ. ಇದು 7ನೇ ಎಡಿಷನ್ ಆಗಿದ್ದು ಒಟ್ಟು 1.2 ಮಿಲಿಯನ್ ಮಕ್ಕಳು ನೋಂದಣಿ ಮಾಡಿಕೊಂಡಿದ್ದರು. ಇದರ ಮುಖ್ಯ ಉದ್ದೇಶ ದೇಶದಲ್ಲಿನ ತಾಂತ್ರಿಕ ಸಮಸ್ಯೆ ಪರಿಹಾರ ಹಾಗೂ ವಿದ್ಯಾರ್ಥಿಗಳಿಗೆ ಅವಕಾಶ, ಅನ್ವೇಷಣೆಗೆ ಪ್ರೋತ್ಸಾಹ ನೀಡುವುದಾಗಿದೆ ಎಂದರು.

### ಇಂದು ಪ್ರಧಾನಿ ಜತೆ ಸಂವಾದ

ಗುರುವಾರ ದೇಶದ ಪ್ರಧಾನಿ ನರೇಂದ್ರ ಮೋದಿ ಅವರು ಯುವ ಪ್ರತಿಭೆಗಳೊಂದಿಗೆ ಸಂವಾದವನ್ನೂ ನಡೆಸಲಿದ್ದಾರೆ. ಭಾರತ ಸರಕಾರದ ವಿವಿಧ ಸಚಿವಾಲಯಗಳು ಈ ಕಾರ್ಯಕ್ರಮದಲ್ಲಿ ಕೈ ಜೋಡಿಸಿವೆ.

Udayavani, Date: 12/12/24, p, no -04